ಉಪಾಧ್ಯಕ್ಷರು : ಈಗ ಮಂತ್ರಿಗಳು ಇಲ್ಲ. ಕೌನ್ಸಿಲ್‌ಗೆ ಹೋಗಿದ್ದಾರೆ ಎಂದು ಕಾಣುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಹೋದ ಸಲವೂ ಹಾಗೆಯೇ ಆಯಿತು. ಕಳೆದ ಅಧಿವೇಶನದಲ್ಲೂ ಹಾಗೆಯೇ ಆಯಿತು. ನಿನ್ನೆ ಕೂಡ ಹಾಗೆಯೇ ಆಯಿತು. ಇಲ್ಲ ಬೇಕು ಎಂದು ಚರ್ಚೆ ಮಾಡುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದರೆ ನೇರವಾಗಿ ಹೇಳಿಬಿಡಿ. ರಾಜ್ಯದ ಜನರ ತೆರಿಗೆಯ ಹಣ ಏನು ಖರ್ಚಾಗುತ್ತಿದೆ? ಈಗ ನ್ಯಾಯಾಂಗ ಇಲಾಖೆಗೆ ಏನು ಸ್ವಾಯತ್ತತೆ ಕೊಡಬೇಕು, ಅಧೀನ ನ್ಯಾಯಾಲಯಗಳು ಎಂದು ಇದೆ. ಅದನ್ನು ಚರ್ಚೆ ಮಾಡಬೇಕು ಎಂಬ ಉದ್ದೇಶ ನಮಗೆ ಇದೆ. ಸಕ್ಕರೆ ಸಹಕಾರಿ ಕಾರ್ಖಾನೆಗಳು ನಷ್ಟಕ್ಕೆ ಒಳಪಟ್ಟಿವೆ.

ಉಪಾಧ್ಯಕ್ಷರು : ಈಗ ಸದನವನ್ನು ಎರಡೂವರೆ ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 1.52 ಕ್ಕೆ ಮುಂದೂಡಲ್ಪಟ್ಟು ಮತ್ತೆ 2.30 ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 9 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರು ಮಾನ್ಯ ಶ್ರೀ ಎನ್.ವೈ. ಗೋಪಾಲಕೃಷ್ಣರವರು ಉಪಸ್ಥಿತರಿದ್ದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕಂದಾಯ ಸಚಿವರು ಉತ್ತರ ಕೊಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನ ಊಟಕ್ಕಾಗಿ ಸದನವನ್ನು ಮುಂದೂಡುವ ಮುಂಚೆಯೇ ನನಗೆ ಮಾತನಾಡಲು ಕರೆದಿದ್ದಿರಿ. ಮಾನ್ಯ ಈಶ್ವರಪ್ಪನವರು ಪ್ರಸ್ತಾಪಿಸಬೇಕೆಂದಿದ್ದ ಕೊಳಚೆ ಪ್ರದೇಶದ ಬಗ್ಗೆ ಮಾತನಾಡಬೇಕಿತ್ತು.

ಉಪಾಧ್ಯಕ್ಷರು : ಇಲ್ಲಿ ಅಜೆಂಡಾದಲ್ಲಿ ಆರ್ಡರ್ ಪ್ರಕಾರವಾಗಿ ಈಗ ಮಾನ್ಯ ಎ.ಟಿ.ರಾಮಸ್ವಾಮಿಯವರು ಪ್ರಸ್ತಾಪ ಮಾಡಬೇಕೆಂದಿರುವ ವಿಷಯವಿದೆ. ನೀವು ಈಗ ಮಾತನಾಡುತ್ತೀರೇನು?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುತ್ತೇನೆ. ಆದರೆ ಇಲ್ಲಿ ಮುಂದಿನ ಸಾಲಿನ ಮಂತ್ರಿಗಳ್ಯಾರೂ ಇಲ್ಲ, ಮುಂದಿನ ಸಾಲಿನಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ಇರಬೇಕಾದ ಅಧಿಕಾರಿಗಳೂ ಇಲ್ಲ. ನಿನ್ನೆಯ ದಿನ ಸಹಕಾರ ಇಲಾಖೆಗೆ ಸಂಬಂಧಪಟ್ಟ ಎಂಟು, ಹತ್ತು

ಪ್ರಶ್ನೆಗಳು ಇದ್ದವು. ಆದರೆ ನಿನ್ನೆ ಮಂತ್ರಿಗಳು ಇರಲಿಲ್ಲವೆಂದು ಹೇಳಿ ನಾಳೆ ಉತ್ತರ ಕೊಡಿಸುತ್ತೇವೆ ಎಂದಿದ್ದರು. ಈಗ ಕೊಳಚೆ ಪ್ರದೇಶದ ಬಗ್ಗೆ ಮಾತನಾಡಬೇಕು.

ಉಪಾಧ್ಯಕ್ಷರು : ನೋಡಿ ಈಗ ಮೊದಲು ಅರ್ಧಗಂಟೆ ಕಾಲಾವಧಿ ಚರ್ಚೆಯಡಿಯಲ್ಲಿ ಇರುವ ಕಾರ್ಯಕಲಾಪವನ್ನು ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಕಾರಜೋಳ ಅವರೆ ಅರ್ಧ ಘಂಟೆ ಕಾಲಾವಧಿ ಚರ್ಚೆ ಬಗ್ಗೆ ವಿಷಯಗಳು ಇದೆ. ಇದನ್ನು ಕೊಟ್ಟಿರುವವರು ಶ್ರೀ ಕಳಕಪ್ಪ ಗುರುಶಾಂತಪ್ಪ ಅವರು. ಈಗ ಕಾರಜೋಳ ಅವರೇ ಅರ್ಧ ಘಂಟೆ ಡಿಸ್‌ಕಷನ್ ಆದಮೇಲೆ we will go for calling Attention.ಅರ್ಧ ಘಂಟೆ ಕಾಲಾವಧಿ ಚರ್ಚೆ ಮುಗಿದು ಹೋಗಲಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಕುಳಿತುಕೊಳ್ಳುತ್ತೇನೆ, ಆದರೆ ನಿನ್ನೆ ಮಾನ್ಯ ಕಂದಾಯ ಸಚಿವರು ಏನು ಹೇಳಿದರು ಎಂದರೆ ಸಹಕಾರ ಸಚಿವರ ಪರವಾಗಿ ಎಲ್ಲಾ ಉತ್ತರಗಳನ್ನು ನಾಳೆ ಹೇಳುತ್ತೇವೆ ಎಂದು ಹೇಳಿದರು. ಅದಕ್ಕೆ ಅವರನ್ನು ಕರೆಸಿ, ಏಕೆಂದರೆ ಇವತ್ತು ಕೊನೇದಿನ. ಸಮಸ್ಯೆಗಳು ಇವೆ.

ಉಪಾಧ್ಯಕ್ಷರು : ಇದು ಮುಗಿದಮೇಲೆ ನೋಡೋಣ. ಈಗ ಕಳಕಪ್ಪ ಗುರುಶಾಂತಪ್ಪ ಅವರು, ಇಲ್ಲ. ಶ್ರೀ ಶಂಕರಲಿಂಗೇಗೌಡರು, ಅವರೂ ಇಲ್ಲ. ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಮಾನ್ಯ ಜಗದೀಶ್ ಶೆಟ್ಟರ್ ಇದ್ದಾರಾ? ಸಿ.ಸಿ.ಪಾಟೀಲ್.....

ಶ್ರೀ ಸಿ.ಸಿ. ಪಾಟೀಲ್ : ನನ್ನದು ಮತ್ತು ಶೆಟ್ಟರ್ ಅವರು ಕೂಡಿಯೇ ವಿಷಯ ಇತ್ತು. ಅತ್ಯಂತ ಮುಖ್ಯವಾದ ವಿಷಯ ಇದೆ, ಆದರೆ ಇಲ್ಲಿ ಹೇಳಬೇಕೆಂದರೆ ಸನ್ಮಾನ್ಯ ಜಲ ಸಂಪನ್ಮೂಲ ಸಚಿವರು ಇಲ್ಲ.

ಉಪಾಧ್ಯಕ್ಷರು : ಈಗ ವಾಟಾಳ್ ನಾಗರಾಜ್‌ರವರು.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಂಕರ್‌ಲಿಂಗೇಗೌಡರು ಕೊಟ್ಟಿರುವಂತಹ ವಿಷಯ ಬಹಳ ಪ್ರಾಮುಖ್ಯ ಇದೆ. ಅದನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು : ಅವರು ಬರಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಏನೂ ಬೇಕಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಲ್ಪಾವಧಿ ಚರ್ಚೆಗೆ ಅವರು ಇರಲೇಬೇಕೆಂದು ಏನಿಲ್ಲ.

ಉಪಾಧ್ಯಕ್ಷರು : ಮಾತನಾಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಾರಂಭ ಮಾಡುತ್ತಾರೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಮಂತ್ರಿಗಳು ಬರಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಬೇಡ ಯಾರೂ ಬೇಡ, ನಾನೇ ಮಾತನಾಡುತ್ತೇನೆ, ಬಂದರೆ ಬರುತ್ತಾರೆ, ಬರದೇ ಇದ್ದರೆ ಬೇಡ.

ಶ್ರೀ ಸಿ.ಸಿ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸುಮಾರು ನಾಲ್ಕು ದಿವಸದಿಂದ ನನ್ನ ಕಾಲಿಂಗ್ ಅಟೆನ್‌ಷನ್ ಬರುತ್ತಿದೆ. ಅಜಂಡಾ ತೆಗೆದುನೋಡಿ.

ಉಪಾಧ್ಯಕ್ಷರು : ಈಗ ಅರ್ಧ ಘಂಟೆ ಕಾಲಾವಧಿ ಚರ್ಚೆ, ಈಗ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸೋಣ.

ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಕೂಡ ಹೀಗೆ ಆಯಿತು.

ಉಪಾಧ್ಯಕ್ಷರು : ಮಂತ್ರಿಗಳು ಬರಲಿ, ಅವರು ಬಂದಮೇಲೆ ಇದರ ಬಗ್ಗೆ ಚರ್ಚೆಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ನಿಮಗೆ ಅನುಕೂಲವಾಗಬೇಕಾದರೆ ಮಂತ್ರಿಗಳು ಇರಬೇಕಲ್ಲಾ .

ಶ್ರೀ ಸಿ.ಸಿ. ಪಾಟೀಲ್ : ಮಂತ್ರಿಗಳನ್ನು ಕರೆಸಿ ಆ ಭಾಗದಲ್ಲಿ ಇರುವಂತಹ ಕಳಸಾ–ಬಂಡೂರಿ ನಾಲೆಗಳಿಂದ ನೀರನ್ನು ಬಿಡುವ ವಿಚಾರವಾಗಿ ನಾನು ಮಾತನಾಡಬೇಕಾಗಿದೆ. ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ.

ಉಪಾಧ್ಯಕ್ಷರು : ಇದನ್ನು ಕಾಲಿಂಗ್ ಅಟೆನ್‌ಷನ್‌ನಲ್ಲಿ ತೆಗೆದುಕೊಳ್ಳೋಣ.

ಮಾನ್ಯ ಸದಸ್ಯರು : ಮಾನ್ಯ ಮುಖ್ಯಮಂತ್ರಿಗಳು ಇಲ್ಲ, ಜಲಸಂಪನ್ಮೂಲ ಸಚಿವರೂ ಇಲ್ಲ. ಯಾರ ಜೊತೆಗೆ ಮಾತನಾಡಬೇಕಾಗಿದೆ?

ಶ್ರೀ ಸಿ.ಸಿ. ಪಾಟೀಲ್ : ಇನ್ನೂ ಅರ್ಧ ಘಂಟೆ ಸದನವನ್ನು ಮುಂದಕ್ಕೆ ಹಾಕುತ್ತೀರಾ.

ಶ್ರೀ ಗೋವಿಂದ ಎಂ. ಕಾರಜೋಳ : ಅಧಿವೇಶನದ ಕೊನೇದಿನ ಸಂಬಂಧಪಟ್ಟ ಪ್ರಿನ್ಸಿಪಲ್ ಸೆಕ್ರೆಟರಿಗಳು ಏನಾಗಿದ್ದಾರೆ? ಏನು xx ಸರ್ಕಾರ ಆಗಿಬಿಟ್ಟಿದೆ ಇದು.

ಉಪಾಧ್ಯಕ್ಷರು : ಅವರು ಹೇಳಿದ್ದನ್ನು ಕಡತದಿಂದ ತೆಗೆದುಬಿಡಿ. ಅದು ಅನ್ ಪಾರ್ಲಿಮೆಂಟರಿ ವರ್ಡ್ಸ್, ಅದು ತಪ್ಪು, ಆ ರೀತಿ ಮಾತನಾಡಬಾರದು.

(ಗೊಂದಲ)

ಉಪಾಧ್ಯಕ್ಷರು : ಅದನ್ನು ಕಡತದಿಂದ ತೆಗೆಸಲಾಗಿದೆ. ದಯವಿಟ್ಟು ಸ್ವಲ್ಪ ಸಹಕಾರ ಕೊಡಿ. ಆ ರೀತಿ ಉಪಯೋಗಿಸಬಾರದು, ಅದು ತಪ್ಪು. ಆ ಪದವನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನಾನೇನು ಪದ ಬಳಸಿದ್ದೇನೆ, ಅದರ ಅರ್ಥ ಯಾರೂ ವಾರಸುದಾರರು ಇಲ್ಲದಿರುವವರು ಎಂದು.

(ಗೊಂದಲ)

ಉಪಾಧ್ಯಕ್ಷರು : ಅದು ಹಾಗಲ್ಲ, ಒಂದು ನಿಮಿಷ ಧ್ರುವನಾರಾಯಣ್ ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಹನುಮಂತಪ್ಪನವರೇ, ಕುಳಿತುಕೊಳ್ಳಿ , ಇದು ಅನ್ ಪಾರ್ಲಿಮೆಂಟರಿ ವರ್ಡ್. ಅದೆಲ್ಲಾ ಸೂಕ್ತ ಅಲ್ಲ. ನೀವು ಅನುಭವಿ ಸದಸ್ಯರು.

(ಗೊಂದಲ)

ಉಪಾಧ್ಯಕ್ಷರು : ಈಗ ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ನೀವೆಲ್ಲಾ ಸುಮ್ಮನಿರಿ. ಆಮೇಲೆ ನೀವು ಆ ಪದದ ಅರ್ಥವನ್ನು ಅವರಿಗೆ ತಿಳಿಸಬೇಕು. ಆ ಪದವನ್ನು ಕಡತದಿಂದ ತೆಗೆದು ಹಾಕಿದ್ದೇವೆ, ಆ ಪದಕ್ಕೆ ಒಂದು ಹಿನ್ನೆಲೆ, ಅದಕ್ಕೆ ಅರ್ಥವನ್ನು ಅವರು ಹೇಳುತ್ತಾರೆ ನೀವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಈಗ ದಯವಿಟ್ಟು ಕುಳಿತುಕೊಳ್ಳಿ, ಈಗ ಆ ಪದ ಅನ್ ಪಾರ್ಲಿಮೆಂಟರಿ ವರ್ಡ್ ಎಂಬುದು ನಿಮ್ಮ ಭಾವನೆ. ಈಗ ಅದನ್ನು ಕಡತದಿಂದ ತೆಗೆದು ಹಾಕಿದ್ದೇವೆ. ಆ ಪದಕ್ಕೆ ಅರ್ಥವನ್ನು ಬಿಡಿಸಿ ಹೇಳುತ್ತಾರೆಂದು ಹೇಳಿದ್ದಾರೆ. ದಯವಿಟ್ಟು ತಾವು ಸಹಕಾರ ಕೊಡಬೇಕು. ಈ ಪರಿಸ್ಥಿತಿಯಲ್ಲಿ ಅರ್ಧ ಘಂಟೆ ಕಾಲಾವಧಿ ಚರ್ಚೆಯನ್ನು ಸ್ಥಗಿತಗೊಳಿಸಲಾಗಿದೆ. ಈಗ ಗಮನ ಸೆಳೆಯುವ ಸೂಚನೆ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಮಾತನಾಡಿ. ಮಾನ್ಯ ಕಾರಜೋಳರವರೇ, ಅದನ್ನೇ ದೊಡ್ಡದು ಮಾಡಬೇಡಿ. ತಾವು ಕುಳಿತುಕೊಳ್ಳಿ. ಅದು ಸಬ್ಜೆಕ್ಟ್ ಆಮೇಲೆ ಬರುತ್ತದೆ, ಆಮೇಲೆ ಮಾತನಾಡೋಣ.

ಶ್ರೀ ಎನ್. ಚೆಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರಿಗೆ ಉಪನಾಯಕರಾಗಿ ಕೇಳುವುದಕ್ಕೆ ಅಧಿಕಾರವಿದೆ. ಮಾನ್ಯ ಮಂತ್ರಿಗಳನ್ನು ಕರೆಸಿ ಎಂದು ತಮಗೆ ಕೇಳಲಿ. ಅಥವಾ ಐದು ನಿಮಿಷ ಸದನವನ್ನು ಮುಂದೂಡಿ

ಮಂತ್ರಿಗಳು ಬೇಕೆಂದು ಕೇಳಲಿ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಪದವನ್ನು ಉಪಯೋಗಿಸಬೇಕಾದರೆ ಅವರ ಘನತೆಗೆ ತಕ್ಕಂಥ ಪದವನ್ನು ಉಪಯೋಗಿಸಬೇಕಾಗುತ್ತದೆ. ದಯಮಾಡಿ ನಾವು ಮಾತನಾಡುವುದಕ್ಕೆ ನಿಂತಿದ್ದೇವೆ. ನಾವು ಇಲ್ಲಿ ಇರತಕ್ಕಂಥವರು ಮಂತ್ರಿಗಳು, ಅದಕ್ಕೆ ಬೇರೆ ಅರ್ಥ ಇದ್ದರೆ ಹೇಳಲಿ. ಇಲ್ಲಿ ಹಿರಿಯ ಸಚಿವರು ಇದ್ದಾರೆ, ನಾನಿದ್ದೇನೆ ಮತ್ತು ಒಬ್ಬ ಮಹಿಳಾ ಸಚಿವರು ಇದ್ದಾರೆ. ಮೂರು ಜನ ಸಚಿವರಿದ್ದೇವೆ, ಮತ್ತೆ ಇನ್ನೂ ಎಲ್ಲಾ ಸಚಿವರು ಇರಬೇಕೆಂದು ಬಯಸತಕ್ಕಂಥಾದ್ದು ಸರಿಯಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಅದನ್ನು ಕೇಳುವಂತಾದ್ದನ್ನು ಸರಿಯಾದ ರೀತಿಯಲ್ಲಿ ಕೇಳಿದರೆ ನಿಮಗೂ ಗೌರವ, ಸದನಕ್ಕೂ ಗೌರವ. ದಯಮಾಡಿ ಮಾತನ್ನು ಯಾವರೀತಿ ಬೇಕಾದರೂ ಆಡಬಹುದು. ಅದು ಸೂಕ್ತ ಅಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದ ಮೇಲೆ ನಾನು ಅದಕ್ಕೆ ಉತ್ತರ ಹೇಳಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಕಾರಜೋಳರವರೆ ಆಮೇಲೆ ಹೇಳಿ. ವಾಟಾಳ್ ನಾಗರಾಜ್ ಅವರೇ ಮಾತನಾಡಿ.

ಶ್ರೀ ಎಂ.ಪಿ.ವೆಂಕಟೇಶ್ : ಅವರು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ: ವಾರಸುದಾರರು ಯಾರೂ ಇಲ್ಲದೆ ಇದ್ದಾಗ ಆ ರೀತಿ ಹೇಳಬೇಕಾಗುತ್ತದೆ. ಅಧಿಕಾರಿಗಳು ಇಲ್ಲ, ಮುಂದಿನ ಸಾಲಿನಲ್ಲಿ ಮಂತ್ರಿಗಳು ಇಲ್ಲ.

(ಗೊಂದಲ)

ಉಪಾಧ್ಯಕ್ಷರು : ನಿಮ್ಮ ಆಡು ಭಾಷೆಯಲ್ಲಿ ನಿಮ್ಮ ಕಡೆ ಭಾವನೆಗಳೇ ಬೇರೆಯಾಗುತ್ತದೆ. ಈ ಭಾಗದಲ್ಲಿರುವಂತಹ ಜನರಿಗೆ ಅದರ ಅರ್ಥವೇ ಬೇರೆಯಾಗುತ್ತದೆ. ಆ ಅರ್ಥದ ಹಿನ್ನೆಲೆಯನ್ನು ನೀವು ಆಮೇಲೆ ಹೇಳಿ. ಈಗ ನಾವು ಕಾಲಿಂಗ್ ಅಟೆನ್‌ಷನ್‌ಗೆ ಕಾಲ್ ಕೊಟ್ಟಿದ್ದೇವೆ. ಈಗ ಮಾನ್ಯ ವಾಟಾಳ್ ನಾಗರಾಜು ಅವರು ಮಾತನಾಡುತ್ತಾರೆ. ತಾವು ದಯವಿಟ್ಟು ಸಹಕಾರ ಕೊಡಬೇಕು. ನಿಮ್ಮ ಪರವಾಗಿ ನಾವು ಮಾತನಾಡಿದ್ದೇವೆ. ನೀವು ದಯವಿಟ್ಟು ಕುಳಿತುಕೊಳ್ಳಿ. ಆ ಪದವನ್ನು ಆಗಲೇ ಕಡತದಿಂದ ತೆಗೆಸಿದ್ದೇವೆ.